ದಿಃ **01.07.2022** ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಯ ಪರ ವಕೀಲರಿಂದಃ-

ಈ ದಾವೆಯನ್ನು ಚೆನ್ನಬಸಪ್ಪರವರ ವಿರುದ್ಧ ಸಲ್ಲಿಸಿದ್ದೇನೆ. ಯಾವ ಕಾರಣಕ್ಕೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು 6,00,000/- ರೂಗಳಿಗೆ ಪ್ರತಿವಾದಿಯ ಹೊಲವನ್ನು ಖರೀದಿ ಮಾಡಿದ್ದೇನೆ 5,00,000/-ಗಳನ್ನು ನೀಡಿದ್ದೇನೆ. ಉಳಿದ ರೂ 1,00,000/-ಗಳನ್ನು ನೀಡಿ ಪತ್ರ ನೊಂದಣಿಗೆ ಕೋರಿ ದಾವೆ ಸಲ್ಲಿಸಿದ್ದೇನೆ ಎಂದು ತಿಳಿಸಿದ್ದಾರೆ. ವಾದ ಪತ್ರಕ್ಕೆ ಅಗತ್ಯವಿದ್ದ ಮಾಹಿತಿಯನ್ನು ನಾನೇ ನೀಡಿದ್ದೇನೆ. ಮುಖ್ಯ ವಿಚಾರಣೆ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ಕ್ರಯದ ಕರಾರು ಪತ್ರಕ್ಕಿಂತ ಒಂದು ವಾರ ಮೊದಲು ಅಂದರೆ ದಿಃ04-01-2017 ರಂದು ಪ್ರತಿವಾದಿಯು ತನ್ನ ಗೃಹ ಕೃತ್ಯದ ಅಡಚಣೆಗಾಗಿ ದಾವಾ ಸ್ವತ್ತನ್ನು ಮಾರುವುದಾಗಿ ತಿಳಿಸಿದ್ದಾರೆ. ಯಾರು ಯಾರು ಬಂದಿದ್ದರು ಎಂದರೆ, ಪ್ರತಿವಾದಿ ಹಾಗೂ ಅವರೊಡನೆ 3-4 ಜನ ಬಂದಿದ್ದರು ಎಂದು ಸಾಕ್ಷಿಯು ಹೇಳಿದ್ದಾರೆ. ಪ್ರತಿವಾದಿಯೊಡನೆ ಬಂದಿದ್ದವರ ಹೆಸರುಗಳನ್ನು ಹೇಳಲಾಗುವುದಿಲ್ಲ. ದಿಃ 05 ಅಥವಾ 6 ಜನೇವರಿ ತಿಂಗಳಿನಲ್ಲಿ ಖರೀದಿ ಬಗ್ಗೆ ಮಾತುಕತೆ ನಡೆಸಿದ್ದೇನೆ. ಮಾತುಕತೆ ನಮ್ಮ ಮನೆಯಲ್ಲಿಯೇ ನಡೆಯಿತು. ಖರೀದಿಯ ಮಾತುಕತೆ ನಡೆದಾಗ ಬಸವರಾಜ ವಕೀಲರು ಇದ್ದರು, ಉಳಿದವರ ಹೆಸರುಗಳನ್ನು ಹೇಳಲು ನೆನಪಾಗುತ್ತಿಲ್ಲ. ಮಾತುಕತೆ ಮಾಡುವ ಸಮಯ 4-5 ಜನರು ಹಾಜರಿದ್ದರು. ಒಟ್ಟು ರೂ 6,00,000/- ಗಳಿಗೆ ದಾವಾ ಸ್ವತ್ತಿನ ಖರೀದಿಯ ಮಾತುಕತೆ ನಡೆಯಿತು. ರೂ 5,00,000 ಗಳನ್ನು ಕ್ರಯ ಪತ್ರ ಬರೆದ ನಂತರ ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ ಪತ್ರಬರಹಗಾರರ ಸಮಕ್ಷಮ ಪ್ರತಿವಾದಿಗೆ ನೀಡಿದ್ದೇನೆ. ಪ್ರತಿವಾದಿಗೆ ಹಣದ ಅವಶ್ಯಕತೆ ಇತ್ತು, ಆಕಾರಣ ದಾವಾ ಸ್ವತ್ತನ್ನು ಮಾರಾಟ ಮಾಡಲು ಬಂದಿದ್ದರು, 4-5 ಜನರ ಸಮಕ್ಷಮ ಮಾತುಕತೆ ನಡೆಸಿ, ಪತ್ರ ಬರಹಗಾರರ ಎದುರು ಪ್ರತಿವಾದಿಗೆ ರೂ 5,00,000/- ಗಳನ್ನು ಮುಂಗಡವಾಗಿ ನೀಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 2,000/- ಮುಖಬೆಲೆ ಎರಡು ಬಂಡಲ್ ನೋಟುಗಳನ್ನು ಮತ್ತು 500/- ಮುಖಬೆಲೆಯ 200/- ನೋಟುಗಳನ್ನು ಕೊಟ್ಟಿದ್ದೇನೆ. ಒಂದು ಬಂಡಲ್ ನಲ್ಲಿ ತಲಾ 100 ನೋಟುಗಳಿದ್ದವು. ರೂ 5,00,000/- ಗಳು ಹೇಗೆ ಬಂತು ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಭೂಮಿ ಇರುತ್ತದೆ, ಅದರ ಆದಾಯದಿಂದ ಮತ್ತು ನನ್ನ ಮಗ ಮತ್ತು ಸೊಸೆ ವೈದ್ಯರು ಇದ್ದಾರೆ, ಅವರ ಆದಾಯದಿಂದ ಬಂದ ಹಣವನ್ನು ನೀಡಿದ್ದೇನೆ ಎಂದು ತಿಳಿಸಿದ್ದಾರೆ. ಸುಳ್ಳು ಹೇಳುತ್ತಿದ್ದೇನೆ ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನಿಂದ ಮುಂಗಡವಾಗಿ ಹಣ ಪಡೆದು, ಉಳಿದ ರೂ 1,00,000/- ಗಳನ್ನು ಪಡೆದುಕೊಂಡು ಕ್ರಯಪತ್ರವನ್ನು ನೊಂದಾಯಿಸಿಕೊಡುವುದಾಗಿ ತಿಳಿಸಿದ್ದರು, ಎಂದು ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಸುಳ್ಳು ವಿವರವನ್ನು ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

ರೂ 20,000/- ಕ್ಕಿಂತ ಹೆಚ್ಚಿನ ಮೊತ್ತವನ್ನು ಡಿ.ಡಿ ಅಥವಾ ಚೆಕ್ಕಿನ ಮೂಲಕ ನೀಡಬೇಕೆಂದು ಆದೇಶ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ನಗದು ಹಣವನ್ನು ತೆಗೆದುಕೊಂಡು ಹೋಗಿದ್ದಲ್ಲಿ, ಉಪನೊಂದಣಾಧಿಕಾರಿಗಳು ಅಥವಾ ಪತ್ರಬರಹಗಾರರು ಆ ವಿಚಾರ ತಿಳಿಸುತ್ತಿದ್ದರು, ನಾನು ಯಾವುದೇ ಹಣವನ್ನು ತೆಗೆದುಕೊಂಡು ಹೋಗಿಲ್ಲ, ಆ ಕಾರಣ ಅವರು ಹಾಗೆ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಎ.ಪಿ.ಎಂ.ಸಿ ಚುನಾವಣೆ ಪ್ರಯುಕ್ತ ರೂ 1,00,000/- ಗಳ ಅಗತ್ಯ ಇತ್ತು, ಸದರಿ ಮೊತ್ತವನ್ನು ನನ್ನ ಅಳಿಯ ವಕೀಲರಾದ ಎನ್.ಎಸ್ ಪಾಟೀಲರವರ ಬಳಿ ಕೇಳಿದ್ದರು, ಸದರಿ ಮೊತ್ತವನ್ನು ಅವರು ಬಸವರಾಜ ವಕೀಲರ ಮೂಲಕ ಪ್ರತಿವಾದಿಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಮತ್ತು ನನ್ನ ಅಳಿಯ ಎನ್ ಎಸ್ ಪಾಟೀಲರವರು ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ಎನ್.ಎಸ್ ಪಾಟೀಲ ಮತ್ತು ಬಸವರಾಜ ವಕೀಲರು ಆತ್ಮೀಯ ಸ್ನೇಹಿತರೆಂದರೆ ನನಗೆ ಗೊತ್ತಿಲ್ಲ.

ಯಾವ-ಯಾವ ದಿನಾಂಕದಂದು ಪ್ರತಿವಾದಿಯ ಬಳಿ ಕ್ರಯಪತ್ರ ನೊಂದಾಯಿಸಿಕೊಡುವಂತೆ ಕೇಳಿದ್ದೀರಿ ಎಂದರೆ, ಸಾಕ್ಷಿಯು ಹಲವು ಬಾರಿ ಕೇಳಿದ್ದೇನೆ ದಿನಾಂಕವನ್ನು ತಿಳಿಸಲು ಆಗುವುದಿಲ್ಲ ಎಂದು ಹೇಳಿದ್ದಾರೆ. ನಾನು ಪ್ರತಿವಾದಿಗೆ ಎಂದೂ ಸ್ವತ್ತಿನ ಖರೀದಿಯ ಸಂಬಂಧ ಹಣ ನೀಡಿಲ್ಲ, ಆದುದರಿಂದ ಸ್ವತ್ತು ನೊಂದಾಯಿಸಿಕೊಡುವ ಪ್ರಮೇಯವೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಹ ಲವು ಬಾರಿ ಕರೆದರೂ ಸಹ ಪ್ರತಿವಾದಿ ಬಂದು ಬಾಕಿ ಹಣವನ್ನು ಪಡೆದುಕೊಂಡು ದಾವಾ ಸ್ವತ್ತನ್ನು ನೊಂದಾಯಿಸಿಕೊಟ್ಟಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸ.ನಂ 30/ಬಿ, 2 ಎಕರೆ, 70 ಸೆಂಟ್ಸ್ ಇರುತ್ತದೆ. ಪೂರ್ವಕ್ಕೆ ಚೆನ್ನಬಸಪ್ಪರವರ ಸರ್ವೆ ನಂ ಸ್ವತ್ತು, ಪಶ್ಚಿಮ ಮತ್ತು ಉತ್ತರಕ್ಕೆ ಜಯಪ್ಪರವರ ಸ್ವತ್ತು, ದಕ್ಷಿಣಕ್ಕೆ ಮಹಿಳೆಯೊಬ್ಬರ ಸ್ವತ್ತು ಇರುತ್ತದೆ ಅವರ ಹೆಸರು ಹೇಳಲು ನೆನಪಾಗುತ್ತಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಉತ್ತರಕ್ಕೆ ಗುರುಸಿದ್ದಪ್ಪ, ದಕ್ಷಿಣಕ್ಕೆ ತಿಪ್ಪಮ್ಮರವರ ಸ್ವತ್ತು ಇರುತ್ತದೆ ಎಂದು ಹೇಳಿದ್ದಾರೆ.

ಪ್ರತಿವಾದಿಗೆ ನಾನು ರೂ 1,00,000/- ಕೈ ಸಾಲ ನೀಡಿದ್ದೇನೆ ಮತ್ತು ಅದರ ಭದ್ರತೆಗೆಗಾಗಿ ನಿಪಿ 1 ಕ್ರಯದ ಕರಾರು ಪತ್ರ ಬರೆಯಿಸಿಕೊಂಡಿದ್ದೇನೆ, ನಿಪಿ 1 ದಾಖಲೆ ಸ್ವತ್ತಿನ ಮಾರಾಟದ ದಾಖಲೆಯ ಸಲುವಾಗಿ ಇರುವ ದಾಖಲೆ ಅಲ್ಲ ಎಂದರೆ ಸರಿಯಲ್ಲ. ರೂ 1,00,000/- ಗಳ ಕೈ ಸಾಲ ನೀಡುತ್ತೇನೆ ಆದರೆ ರೂ 6,00,000/- ಗಳಿಗೆ ಖರೀದಿ ಪತ್ರ ಬರೆದುಕೊಟ್ಟರೆ ಹಣ ನೀಡುತ್ತೇನೆ ಎಂದು ತಿಳಿಸಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ರೂ 1,00,000/- ಗಳನ್ನು ನೀಡಿ, ರೂ 5,00,000/- ಗಳ ಮುಂಗಡ ಹಣ ನೀಡಿದ್ದೇನೆ ಎಂಬುದಾಗಿ ನಿಪಿ 1 ರ ಪತ್ರ ಬರೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ ನಾನು ಮೇಲೆ ಹೇಳಿದಂತೆ ಪತ್ರಬರಹಗಾರರ ಮುಂದೆ ಪ್ರತಿವಾದಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ ದಾವಾ ಸ್ವತ್ತು ರೂ 20,00,000/-ಗಿಂತಲೂ ಹೆಚ್ಚಿನ ಬೆಲೆ ಬಾಳುತ್ತದೆ ಆದರೂ ಸಹ ಬದ್ರತೆಗಾಗಿ

ಬರೆಯಿಸಿಕೊಂಡಿದ್ದ ದಾಖಲೆಯನ್ನು ದೂರುಪಯೋಗ ಪಡಿಸಿ, ಪ್ರತಿವಾದಿಯ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ



ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ರೂ 1,00,000/- ಗಳನ್ನು ಬಡ್ಡಿ ಸಹಿತ ಹಿಂತಿರುಗಿಸಲು ತಯಾರಿದ್ದಾರೆ ಎಂದರೆ, ಸಾಕ್ಷಿಯು ನಾನು ರೂ 5,00,000/- ಗಳನ್ನು ನೀಡಿದ್ದೇನೆ ಎಂದು ತಿಳಿಸಿದ್ದಾರೆ. ನಿಪಿ 4 ರಲ್ಲಿ ಯಾವ ದಿನಾಂಕದಂದು ಬಂದು ಪತ್ರ ನೊಂದಣಿ ಮಾಡಿಕೊಡಬೇಕೆಂದು ಬರೆಸಿದ್ದೀರಾ ಎಂದರೆ, ಸಾಕ್ಷಿಯು ಆ ರೀತಿ ಬರೆಸಿಲ್ಲ ದಾಖಲೆಗಳನ್ನು ತಂದು ನೊಂದಾಯಿಸಿಕೊಡುವಂತೆ ತಿಳಿಸಿದ್ದೆ, ಅವರೇ ಬರಬೇಕೆಂದು ತಿಳಿಸಿದ್ದಾರೆ. ಪ್ರತಿವಾದಿಗೆ ರೂ 5,00,000/- ಗಳ ಮುಂಗಡ ಹಣ ನೀಡದ್ದೆ ಇದ್ದರೂ ಸಹ ನೀಡಿದ್ದೇನೆ, ಬಾಕಿ ಮೊತ್ತವನ್ನು ನೀಡಲು ತಯಾರಿದ್ದೇನೆ ಎಂದರೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳು ವಿವರ ನಮೂದಿಸಿದ್ದೇನೆ ಮತ್ತು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಿಃ 10-01-2017 ರಂದು ಪ್ರತಿವಾದಿಯು ಮಧ್ಯಾಹ್ನ 2-00 ಗಂಟೆಯ ಸಮಯಕ್ಕೆ ನಿಪಿ 1 ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ನಿಪಿ 1 ರ ವಿವರಗಳನ್ನು ಪತ್ರಬರಹಗಾರರು ಹೇಳಿ ಬರೆಸಿದ್ದಾರೆ. ನಿಪಿ 1 ನ್ನು ಬರೆಯುವಾಗ ಪ್ರತಿವಾದಿ, ನಿಂಗಪ್ಪ ಎಂಬುವವರು ಹಾಗೂ ವಕೀಲರಾದ ಬಸವರಾಜರವರು ಹಾಜರಿದ್ದರು, ಪತ್ರಬರಹಗಾರರಾದ ನಿಂಗಣ್ಣ ಎಂಬುವವರು ಸಹ ಹಾಜರಿದ್ದರು. ಪತ್ರಬರಹಗಾರರು ಒಂದು ಕಡೆ ತಮ್ಮ ಸಹಿಯನ್ನು ಮಾಡಿದ್ದಾರೆ ಮೊದಲಿಗೆ ನಿಪಿ 1 ಕ್ಕೆ ಪ್ರತಿವಾದಿಯು ಸಹಿ ಮಾಡಿದ್ದಾರೆ.

<u>ಮರು ವಿಚಾರಣೆಃ-ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನಹಡಗಲಿ